<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 20925-2024

ಸಿಡಬ್ಲೂ - 18ಪಿಡಬ್ಲೂ-9

| | |
|---|---|
| ಸಾಕ್ಷಿದಾರರ ಹೆಸರು | : ಗುರುಸಿದ್ಧಪ್ಪ |
| ತಂದೆಯ ಹೆಸರು | : ಮಲ್ಲಪ್ಪ |
| ವಯಸ್ಸು | : 30 ವರ್ಷ |
| ಕೆಲಸ | : ಆಟೋ ಚಾಲಕ |
| ವಾಸ | : ಇಂದಿರಾನಗರ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನನಗೆ ಚಾಸಾ 19 ರವರು ಗೊತ್ತು. ಈಗ್ಗೆ ಒಂದು ವರ್ಷದ ಹಿಂದೆ ನಾನು ಸಿಐಡಿ ಕಚೇರಿಯಲ್ಲಿ ಮೊಬೈಲ್ ಅಮಾನತ್ತು ಪಡಿಸಿಕೊಂಡ ದಾಖಲೆಗೆ ನಾನು ಮತ್ತು ಚಾಸಾ 19 ರವರು ಸಹಿ ಮಾಡಿರುತ್ತೇವೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 8 ಎಂದು ಸಾಕ್ಷಿಯ ಸಹಿಯನ್ನು ನಿಪಿ. 8 ಎ ಎಂದು ಗುರುತಿಸಲಾಯಿತು. ಒಂದು ಮುಚ್ಚಿದ ಲಕೋಟೆಯನ್ನು ಹಾಜರುಪಡಿಸಿದ್ದು ಅದನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ಕಪ್ಪು ಬಣ್ಣದ ನೋಕಿಯಾ ಕಂಪನಿಯ ಮೊಬೈಲ್ ಇರುತ್ತದೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮು. ಮಾ 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ</u>

ಮು. ಮಾ 1 ರಲ್ಲಿದ್ದ ಡೇಟಾವನ್ನು ರೀಟ್ರೀವ್ ಮಾಡಿದ ವಿಚಾರವಾಗಿ ನಿಪಿ. 8 ನ್ನು ತಯಾರಿಸಿ ಆ ವಿಚಾರವಾಗಿ ನಮ್ಮ ಸಹಿಗಳನ್ನು ಪಡೆದುಕೊಳ್ಳಲಾಗಿರುತ್ತದೆ ಬದಲಿಗೆ ಮೊಬೈಲ್ ನ್ನು ಅಮಾನತ್ತು ಪಡಿಸಿಕೊಂಡ ವಿಚಾರಕಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಮು. ಮಾ 1 ರಿಂದ ರೀಟ್ರೀವ್ ದಾಖಲಾತಿ ದೋಷಾರೋಪಣ ಪತ್ರ ಪುಟಸಂಖ್ಯೆ 460 ರಿಂದ 471 ರವರೆಗಿನ ದಾಖಲೆಗಳನ್ನು ತೋರಿಸಿದ್ದು ಅವುಗಳನ್ನು ಮು. ಮಾ 1 ರಿಂದ

ರೀಟ್ರೀವ್ ಮಾಡಲಾದ ದಾಖಲಾತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿಪಿ. 8 ನ್ನು ಮು. ಮಾ 1 ರೀಟ್ರೀವ್ ಗಾಗಿ ತಯಾರಿಸಿದ್ದು ಆ ಸಮಯದಲ್ಲಿ ಮೇಲೆ ಹೇಳಲಾದ ಪುಟಗಳ ದಾಖಲೆಗಳನ್ನು ರೀಟ್ರೀವ್ ಮಾಡಿ ಪ್ರಿಂಟ್ ತೆಗೆಯಲಾಗಿದ್ದು ಅವುಗಳನ್ನು ನಾನು ನೋಡಿ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಕೇವಲ ಸೀಜ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u> ಇಲ್ಲಾ

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ